## ಗೌರವಾನ್ವಿತ 4 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ.

ದಿಃ 04-01-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
ಮುಂದುವರೆದ ಪಾಟೀ ಸವಾಲುಃ ಶ್ರೀ MNK ವಕೀಲರಿಂದ.

ನಾನು ಓ ಎಸ್ ನಂಬರ 260/16 ದಾವೆಯನ್ನು ಶಿವಾಜಿ ಸಾವಿ ಎನ್ನುವವರ ಮೇಲೆ ಹೂಡಿದ್ದೆ ಎಂದರೆ ಸರಿ . ಸದರಿ ದಾವೆಯನ್ನು ನಿರ್ದಿಷ್ಟ ಕರಾರಿನ ಪಾಲನೆಗಾಗಿ ಹೂಡಿದ್ದೆ . ಸದರಿ ದಾವೆಯನ್ನು ಸರ್ವೆ ನಂಬರ 9/1 ಗಾಗಿ ಹೂಡಿದ್ದೆ. ಸದರಿ ದಾವೆಯ ಕರಾರು ಪತ್ರದಲ್ಲಿ ಈ ದಾವೆಯಲ್ಲಿ ಸಾಕ್ಷಿ ನುಡಿದಿರುವ ಪಿಡಬ್ಲೂ 2 ಮತ್ತು 3 ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದು ತೋರಿಸಲಾಗಿದೆ ಎಂದರೆ ಸರಿ. ನಾನು ಮತ್ತು ಸಾಕ್ಷಿದಾರರು ಸೇರಿ ಖೊಟ್ಟಿ ದಾಖಲೆಗಳನ್ನು ತಯಾರು ಮಾಡಿಕೊಂಡು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

2002-03 ರಲ್ಲಿ ದಾವಾ ಆಸ್ತಿಗೆ ಪ್ರತಿವಾದಿಯ ಹೆಸರು ನಮೂದು ಆಗಿರಲಿಲ್ಲ ಎಂದು ಸಾಕ್ಷಿಗೆ ದಾವಾ ಆಸ್ತಿಯ ಪಹಣಿ ಪತ್ರಿಕೆಯನ್ನು ತೋರಿಸಲಾಗಿ ಸಾಕ್ಷಿಯು ಹೌದು ಎಂದು ಒಪ್ಪಿದ ಕಾರಣ ದಾವಾ ಆಸ್ತಿಯ ಪಹಣಿ ಪತ್ರಿಕೆಯನ್ನು ನಿಡಿ 1 ಎಂದು ಗುರುತಿಸಲಾಯಿತು. ನಿಡಿ 1 ರಲ್ಲಿ ನಮೂದ ಆಗಿರುವ ಹೆಸರಿನ ವ್ಯಕ್ತಿಗಳ ಬಳಿ ನಿಪಿ 1 ಕ್ಕೆ ಸಹಿ ಪಡೆಯಲು ಅಡಚಣೆ ಇರಲಿಲ್ಲ . ದಾವಾ ಆಸ್ತಿ ಪ್ರತಿವಾದಿಯ ಮಾಲೀಕತ್ವದಲ್ಲಿ ಇದೆ ಎಂದು ಅವರ ಸಹೋದರರ ಬಳಿ ಖಚಿತ ಪಡಿಸಿಕೊಂಡಿದ್ದೆ . ನಾನು ಯಲ್ಲಪ್ಪಾ ನಾಗಪ್ಪಾ ಅಷ್ಟಗಿ ಅವರ ಬಳಿ ಖಚಿತ ಪಡಿಸಿಕೊಂಡಿದ್ದೆ . ಸದರಿಯವರು ಈಗ ಜೀವಂತ ಇಲ್ಲ. ನಾನು ಆ ರೀತಿ ಅವರ ಬಳಿ ಖಚಿತ ಪಡಿಸಿಕೊಂಡಿದ್ದೆ ಎಂದು

ತೋರಿಸಲು ನನ್ನ ಬಳಿ ಯಾವುದೇ ಸಾಕ್ಷ್ಯ ಪುರಾವೆ ಇರುವುದಿಲ್ಲ . ನಾನು ಆ ರೀತಿ ಖಚಿತ ಪಡಿಸಿಕೊಂಡಿದ್ದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಪ್ರತಿವಾದಿಯ ಮಾಲೀಕತ್ವದ ಬಗ್ಗೆ ಬೇರೆ ಯಾರನ್ನು ವಿಚಾರಿಸಿರುವುದಿಲ್ಲ.

ನನ್ನ ಗ್ರಾಮ ಮುಚ್ಚಂಡಿ ಪೋಸ್ಟ ವ್ಯಾಪ್ತಿಗೆ ಬರುತ್ತದೆ. ನಮ್ಮ ಗ್ರಾಮಕ್ಕೆ ಪೋಸ್ಟಮ್ಯಾನ ದಿನಕ್ಕೆ ಒಂದು ಬಾರಿ ಬರುತ್ತಾರೆ.

ಪ್ರಶ್ನೆಃ 2016-17 ರಲ್ಲಿ ಇದ್ದ ಪೋಸ್ಟಮ್ಯಾನ ಈಗಲೂ ಇದ್ದಾರೆಯೇ?

ಉತ್ತರಃ ಈಗ ಬದಲಾಗಿರಬಹುದು.

ನಿಪಿ 6 ನ್ನು ಪೋಸ್ಟಮ್ಯಾನ ಪ್ರತಿವಾದಿಗೆ ಎಂದಿಗೂ ನೀಡಲು ಹೋಗಿರಲಿಲ್ಲ ಎಂದರೆ ಸಾಕ್ಷಿಯು ಪೋಸ್ಟಮ್ಯಾನ ಕೆಲಸ ಆಗಿರುವ ಕಾರಣ ತನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ನಾನು ಪೋಸ್ಟಮ್ಯಾನ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ನಿಪಿ 6 ನ್ನು ಪ್ರತಿವಾದಿ ಪಡೆದಿಲ್ಲ ಎಂದು ನಮೂದು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಇಂದಿಗೂ ಪ್ರತಿವಾದಿಯ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಸ್ವಾಧೀನದಲ್ಲಿ ಇದ್ದೇನೆ ಎಂದು ತೋರಿಸಲು ನನ್ನ ಬಳಿ ಸರಕಾರಿ ಕಾಗದ ಇರುವುದಿಲ್ಲ.

ಜೂನ 2017 ರಲ್ಲಿ ಪ್ರತಿವಾದಿ ಹೊಲದಲ್ಲಿ ಬೆಳೆ ತೆಗೆಯುವಾಗ ನಾನು ಪೋಲಿಸ ದೂರು ನೀಡಿದ್ದೆ ಎಂದರೆ ಸರಿ. ನಾನು ದೂರು ನೀಡಿದ ನಂತರ ಪೋಲಿಸನವರು ನನ್ನನ್ನು ಮತ್ತು ಪ್ರತಿವಾದಿಯನ್ನು ಕರೆಯಿಸಿ ವಿಚಾರಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ . ಈ ದಾವೆಯಲ್ಲಿ ಸ್ಟೇ ಆದೇಶ ಪಡೆದು ದಾವಾ ಆಸ್ತಿಗೆ ಪ್ರವೇಶ ಮಾಡಲು ಪ್ರಯತ್ನ ಮಾಡಿದೆ ಎಂದರೆ ಸಾಕ್ಷಿಯು ತಾನು

ಸ್ಟೇ ಆದೇಶ ಪಡೆದಿರುವುದಿಲ್ಲ ಮತ್ತು ಸ್ವಾಧೀನ ತನ್ನ ಬಳಿ ಇರುತ್ತದೆ ಎಂದು ನುಡಿಯುತ್ತಾರೆ . ದಾವಾ ಆಸ್ತಿ ಪ್ರತಿವಾದಿಗೆ ಪಿತ್ರಾರ್ಜಿತ ಆಸ್ತಿಯಾಗಿದ್ದು ಪ್ರತಿವಾದಿಯ ಮಕ್ಕಳಿಗೂ ಅದರಲ್ಲಿ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯು ನಮ್ಮ ಸೊಸೈಟಿಯಲ್ಲಿ ಹಾಜರು ಪಡಿಸಿದ ಖಾಲಿ ಬಾಂಡ ಪೇಪರನ್ನು ದುರುಪಯೋಗ ಮಾಡಿಕೊಂಡು ನಿಪಿ 1 ನ್ನು ಖೊಟ್ಟಿಯಾಗಿ ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ನನ್ನಿಂದ ಎಂದು ಹಣ ಪಡೆದಿರುವುದಿಲ್ಲ ಮತ್ತು ನಿಪಿ 1 ನ್ನು ಮಾಡಿಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ತನ್ನಿಂದ ಪ್ರತಿವಾದಿ ಹಣ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆ.ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿಯಿದೆ.**

**ಸಹಿ/-**

**4 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**

**ಬೆಳಗಾವಿ.**